


# ನಿಲ್ಲುವುದೆ ಒಲವಿನೂಟೆ ಚಿಮ್ಮದೆ

ಬೇಡದೆ ಬರುವುದೆ ಅನುರಾಗ ಮನಸಿಗೆ
ತಡೆಯಿಡೆ ನಿಲ್ಲುವುದೆ ಒಲವಿನೂಟೆ ಚಿಮ್ಮದೆ

ಯಾವ ತಡೆಯೆ ಅಂತರಂಗ ನುಡಿವ ಸಾನುರಾಗಕೆ
ಸುಂಕದಕಟ್ಟೆ ಇದೆಯೆ ಸ್ವಪ್ನಸೀಮೆ ಪ್ರವೇಶಕೆ

ಭಾವರಾಗ ಮಿಡಿವ ವೀಣೆಗೇಕೆ ಪಕ್ಕವಾದ್ಯದ ಹಂಗು
ಒಲುಮೆ ಗೀತೆಗೇಕೆ ಅನುವಾದದ ತೊಡಪು

ಯಮುನಾ ತೀರದಲ್ಲಿ ರಾಧಾ ಕೃಷ್ಣರ ಪ್ರಣಯ ಭಾವಗೀತ
ಪಂಚವಟಿ ಕೊರಳಿನಲ್ಲಿ ಸೀತಾರಾಮರ ಒಲುಮೆ ಗಾನ

● ಸ. ರಘುನಾಥ
ಕಲೆ: ವಾಗೀಶ ಹೆಗಡೆ

